ಹಾಡ್ಯ ಬ. ಜಯಾನಂದ, ಮೈಸೂರು

*ರಸ್ತೆ ಅಪಘಾತಗಳನ್ನು ವಿಡಿಯೋ ಮಾಡುವವರನ್ನು ಎಲ್ಲಿಗೆ ಸೇರಿಸಬೇಕು?*



ನ್ಯೂಸ್ ಚಾನಲ್‌ಗೆ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ತನ್ನ ಪ್ರಾಣ ಉಳಿಸಿಕೊಳ್ಳಲು ಬಣ್ಣ ಬದಲಾಯಿಸುವ ಊಸರವಳ್ಳಿಯನ್ನು ರಾಜಕಾರಣಿಗೆ ಹೋಲಿಸುವುದು ಸರಿಯೆ?*

'ಹೋಲಿಸಲಿ ಬಿಡಿ; ಸದ್ಯಕ್ಕೆ ಹೋಲಿಕೆಗೆ ಬೇರೆ ಪ್ರಾಣಿಗಳು ಒಪ್ಪುತ್ತಿಲ್ಲ.

ಎಚ್.ಆರ್. ದೇಸಾಯಿ, ರಾಯಚೂರು

*ನಟರ, ಆಟಗಾರರ ಹಸ್ತಾಕ್ಷರ ಪಡೆಯಲು ಜನ ಮುಗಿಬೀಳುವಂತೆ ರಾಜಕಾರಣಿಗಳ ಹಸ್ತಾಕ್ಷರ ಪಡೆಯಲು ಏಕೆ ಮುಗಿಬೀಳುವುದಿಲ್ಲ?*

ಮುಗಿಬಿದ್ದಾರು. ಹಸ್ತಾಕ್ಷರದ ಮೇಲೆ ರಾಜೀನಾಮೆಪತ್ರ ಟೈಪ್ ಮಾಡಿಬಿಟ್ಟಾರೆಂಬ ಭಯದಿಂದ ಅವರೇ ರುಜು ಹಾಕಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು

*ಮದುವೆಯ ಸಂದರ್ಭದಲ್ಲಿ ಕೆಲವರು ಗಂಡನ್ನು ಕುದುರೆಯ ಮೇಲೆ ಕೂರಿಸಿಕೊಂಡು ಬರುತ್ತಾರಲ್ಲ, ಏಕೆ?*



ಮದುವೆ ಕುದುರಿಸುವಾಗ ಗಂಡು ಉನ್ನತ ಸ್ಥಾನದಲ್ಲಿ ಇದ್ದಾನೆ ಎಂದು ಹೇಳಿರುತ್ತಾರಲ್ಲ!

ಮಹಾವೀರ ಕಾಸರ, ಶಿವಮೊಗ್ಗ

*ಮಂಗಳಸೂತ್ರ ಎನ್ನುತ್ತಾರೆ. ಆದರೆ ಅದನ್ನು ಕಟ್ಟಿದಾಗಿನಿಂದ ನೂರೆಂಟು ವಿಘ್ನಗಳು ಪ್ರಾರಂಭವಾಗುತ್ತವಲ್ಲಾ...?*

ಸರಿಯಾಗಿಯೇ ಇದೆ. ಮಂಗಳ = ಅಂಗಾರಕ = ಕೆಂಡ = ಕೆಂಪು = ಅಪಾಯಸೂಚಕ!

ಪೇಂಟರ್ ಪಾಪು, ಸಂತೇಮರಹಳ್ಳಿ

*ಬಲಗೈಲಿ ಕೊಟ್ಟಿದ್ದು ಎಡಗೈಗೆ ತಿಳಿಯಬಾರದಂತೆ. ಏಕೆ?*

ಮನಸ್ಸಿಗೆ 'ಕೊಟ್ಟಿದ್ದರಲ್ಲಿ ಬಲವಿದೆ' ಎನ್ನಿಸಬೇಕೇ ವಿನಹ 'ಕೊಟ್ಟಿದ್ದರಲ್ಲಿ ಎಡವಿದೆ' ಎನ್ನಿಸಬಾರದಲ್ಲ!

ಎಂ.ಎ. ಕುಮಾರ್, ಬೆಂಗಳೂರು

*ಗಣೇಶ ತಂದೆತಾಯಿಯಲ್ಲಿ ವಿಶ್ವವನ್ನೇ ಕಂಡ. ಈಗಿನ ಮಕ್ಕಳು ತಂದೆತಾಯಿಯಲ್ಲಿ ಏನನ್ನು ಕಾಣುವರು?*

ಮೊಬೈಲನ್ನು– ತನ್ಮೂಲಕ ವೆಬ್‌ಸೈಟ್‌ಗಳನ್ನು – ತನ್ಮೂಲಕ ವಿಶ್ವವನ್ನು!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಕೊಟ್ಟವ ಕೋಡಂಗಿ; ಇಸ್ಕೊಂಡವ ಈರಭದ್ರ; ತಿಂದವ?*

ದಳ್ಳಾಳಿ!

ಫಾಲನೇತ್ರ ಸಜ್ಜನ, ಶಿರಸಿ

*ನಿಮಗೆ ಹೆಚ್ಚು ಇಷ್ಟವಾದ ರತ್ನ ಯಾವುದು ಮತ್ತು ಯಾಕೆ?*

ಕನ್ಯಾರತ್ನ; ಸುಖ ಸಂಸಾರಕ್ಕೆ.

ವಿ.ಹೇಮಂತಕುಮಾರ್, ಬೆಂಗಳೂರು

*ಸರಿಯಾಗಿ ಬ್ಯಾಂಡೇಜ್ ಕಟ್ಟುವುದಕ್ಕೂ ಬರದವರು ಸಹ ಡಾಕ್ಟರ್ ಆಗಿರುತ್ತಾರಲ್ಲಾ...?*

ಅವರು ಸ್ಪೆಷಲಿಸ್ಟ್ ಡಾಕ್ಟರ್‌ಗಳು– ಮೂಗಿಗೆ ಹತ್ತಿ ತುರುಕುವುದೇ ಅವರ ಸ್ಪೆಷಾಲಿಟಿ!

ಕೆ.ಯಂ. ವೀರೇಶ, ಕೂಡ್ಲಿಗಿ

*ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಹಿಂದಿನವರು ಅಧಿಕಾರ ತ್ಯಜಿಸುತ್ತಿದ್ದರು. ಈಗಿನವರು?*

ಅಧಿಕಾರಕ್ಕೆ ಧಕ್ಕೆ ಬಂದರೆ ಸ್ವಾಭಿಮಾನವನ್ನೇ ತ್ಯಜಿಸುತ್ತಾರೆ.

ಎಸ್. ಚನ್ನಬಸವಶಾಸ್ತ್ರಿ, ತಳಕು

*ತ್ರಿಮೂರ್ತಿಗಳಿಗೂ ಹೆಣ್ಣು ಸಂತಾನವಿಲ್ಲ. ಏಕೆ? ಅವರಿಗೂ ಗಂಡುಮಗುವಿನ ವ್ಯಾಮೋಹವೆ?*

ಸುತೆಯರಿದ್ದಾರೆ! ಬ್ರಹ್ಮನಿಗೆ ಶತರೂಪಾ; ವಿಷ್ಣುವಿಗೆ ವಲ್ಲಿ, ದೇವಯಾನಿ; ಶಿವನಿಗೆ ಅಶೋಕಸುಂದರಿ, ಜ್ಯೋತಿ, ಮಾನಸ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಕಾಲು ಜಾರಿದರೆ ಏಳಬಹುದು. ಶೀಲವೇ ಜಾರಿದರೆ?*

ಕ್ಷಮಾಶೀಲರಿದ್ದರೆ ಅವರೂ ಏಳಬಹುದು.

## ಬಹುಮಾನಿತ ಪ್ರಶ್ನೆ

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

*ಸಿನೆಮಾಗಳಲ್ಲಿ ಹೀರೋಯಿನ್‌ಗೆ ತುಂಡುಬಟ್ಟೆ; ಹೀರೋಗೆ ಫುಲ್ ಡ್ರೆಸ್. ಏಕೆ ಹೀಗೆ?*

ಹೀರೋದು ಪ್ರಕ್ಷುಬ್ಧ ಮನಸ್ಸು, ಹೀರೋಯಿನ್‌ದು ಬಿಚ್ಚುಮನಸ್ಸು ಎಂದು ತೋರಿಸುವ ಹುನ್ನಾರವಂತೆ!

ವಿ. ಹಮೀದ್, ವಿಟ್ಲ

*ಕಾಲೇಜುಗಳಲ್ಲಿ ಲೈಂಗಿಕ ಶಿಕ್ಷಣ ಜಾರಿಗೆ ತಂದರೆ ಹೇಗಾದೀತು?*

ಆ ಒಂದು ಪೀರಿಯಡ್ಡಾದರೂ ಹೌಸ್‌ಫುಲ್ ಆದೀತು.

ಹೆಚ್.ಆರ್. ಕಡಿವಾಲ, ಬದಾಮಿ

*ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ ಎನ್ನುತ್ತಾರಲ್ಲಾ...?*

ನಿಜ. ವಿಚ್ಛೇದನದ ಕೇಸ್ ನಡೆಸುವ ಎರಡೂ ಕಡೆಯ ವಕೀಲರು ತೃಪ್ತಿಯಿಂದ ಉಂಡು ಮಲಗುವ ತನಕ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಕನ್ನಡದ ಚಲನಚಿತ್ರ ಮತ್ತು ಧಾರಾವಾಹಿಗಳಲ್ಲಿ ದೆವ್ವಗಳ ಕಾಟವೇ ಅಧಿಕವಾಗುತ್ತಿದೆಯಲ್ಲ ರಾಮ್?*



ಶ್! ಯಾರಿಗೂ ಹೇಳ್ಬೇಡಿ... ಇದು ಮೇಕಪ್ ಖರ್ಚು ಉಳಿಸಲು ನಿರ್ದೇಶಕರು ಮಾಡಿದ ಉಪಾಯವಂತೆ.

ಸುಂದರ್, ಬೆಂಗಳೂರು

*ಇಂದಿನ ಹದಗೆಟ್ಟಿರುವ ಪರಿಸ್ಥಿತಿಯಲ್ಲಿ 'ಸತ್ಯಮೇವ ಜಯತೇ' ಎಷ್ಟರ ಮಟ್ಟಿಗೆ ಪ್ರಸ್ತುತ?*

'ಮೇವ' ಎಂದರೆ ಮೇಯುವವ ಎಂಬ ಅರ್ಥದಲ್ಲಿ ಸತ್ಯವನ್ನು ಮೇಯುವವನೇ ಜಯಿಸುತ್ತಾನೆ ಎಂಬುದೇ ಪ್ರಸ್ತುತ.

ರಮೇಶ್, ಹನುಮನಾಳು

*ತಾಯಿ ಮಮತೆಯ ಮಡಿಲು. ತಂದೆ?*

ರಕ್ಷಣೆಯ ಕಡಲು.

■ ರಾಮ್